4ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಸ್ಪೇಷಲ್ ನ್ಯಾಯಾಧೀಶರು
(ಪಿಸಿಎ) ಬೆಳಗಾವಿ ಇವರ ನ್ಯಾಯಾಲಯದಲ್ಲಿ
ಮುಕ್ಕಾಂಃ ಬೆಳಗಾವಿ.

ಸ್ಪೇಷಲ್ ಕೇಸ್ ನಂಃ 533/2019
ಚಾಸಾ- 11
ಫ್ರಾಸಾಃ 11

| | |
|---|---|
| ಸಾಕ್ಷಿಯ ಹೆಸರುಃ | ಯಲ್ಲಪ್ಪ ಶ್ಯಾಮರಾವ ಧರನಾಯ್ಕು |
| ತಂದೆಯ ಹೆಸರುಃ | ಶ್ಯಾಮರಾವ ಧರನಾಯ್ಕು |
| ವಯಸ್ಸುಃ | 64 ವರ್ಷ |
| ಉದ್ಯೋಗಃ | ನಿವೃತ್ತ ಪೊಲೀಸ ಇನಸ್ಪೆಕ್ಟರ |
| ವಾಸ್ತವ್ಯಃ | ಬೆಳಗಾವಿ |

ದಿನಾಂಕಃ **20.08.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನಾನು ಪೆಬ್ರವರಿ 2017 ರಿಂದ ಮಾರ್ಚ 2020 ರವರೆಗೆ ಪೊಲೀಸ ಇನಸ್ಪೆಕ್ಟರ ಎಂದು ಎಸಿಬಿ ಪೊಲೀಸ ಠಾಣೆ ಬೆಳಗಾವಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿ 07.07.2018 ರಂದು ನಾನು ಠಾಣೆಯಲ್ಲಿದ್ದಾಗ ಚಾಸಾ-18 ರವರು ದೂರವಾಣಿ ಮುಖಾಂತರ ಆರ್.ಪಿ.ಡಿ ಕ್ರಾಸ್ ಹತ್ತಿರ ರಸೋಯಿ ಹೊಟೇಲ ಬಳಿ ಬರಲು ತಿಳಿಸಿರುತ್ತಾರೆ. ಅದರಂತೆ ನಾನು ಸ್ಥಳಕ್ಕೆ ಹೋದೆನು. ಚಾಸಾ-18 ರವರು ಅಲ್ಲಿ

ನಡೆದ ಘಟನೆಯ ಬಗ್ಗೆ ತಿಳಿಸಿ 1ನೇ ಆರೋಪಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಇದ್ದಾರೆ ಅಂತಾ ತಿಳಿಸಿ ಅವರ ಹೆಸರು ಮತ್ತು ದೂರವಾಣಿ ಸಂಖ್ಯೆ ಒದಗಿಸಿ ಜೊತೆಗೆ ಪಂಚ–2 ಹಾಗೂ ಸಿಬ್ಬಂದಿಗಳನ್ನು ಕರೆದುಕೊಂಡು ಹೋಗಿ 1ನೇ ಆರೋಪಿಯನ್ನು ಹಾಜರುಪಡಿಸಿಸುವಂತೆ ತಿಳಿಸಿದ ಮೇರೆಗೆ ನಾನು ಪಂಚ–2 ಮತ್ತು ಸಿಬ್ಬಂದಿಯವರೊಂದಿಗೆ ಡಿ.ಸಿ. ಕಚೇರಿಗೆ ಹೋಗಿ 1ನೇ ಆರೋಪಿಯನ್ನು ಕರೆದುಕೊಂಡು ಬಂದು ಚಾಸಾ–18 ರವರ ಮುಂದೆ ಸದರಿ ಸ್ಥಳದಲ್ಲಿ ಹಾಜರುಪಡಿಸಿರುತ್ತೇನೆ. ಅಲ್ಲಿ ತಯಾರಿಸಿದ ಪಂಚನಾಮೆ ಕಾಲಕ್ಕೆ ನಾನು ಹಾಜರು ಇದ್ದು, ಸದರಿ ಪಂಚನಾಮೆಗೆ ಸಹಿ ಹಾಕಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ–10 ಅಂತಾ ಗುರುತಿಸಲಾಗಿದೆ. ಅದರಲ್ಲಿ ಇರುವ ಸಾಕ್ಷಿ ಸಹಿಯನ್ನು **ನಿಪಿ–10(ಡಿ)** ಅಂತಾ ಗುರುತಿಸಲಾಯಿತು. ಈ ಕುರಿತು ನಾನು ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ. ಹೆಚ್.ಸಿ.ಎಸ್ ವಕೀಲರಿಂದಃ**

3. ನಾನು ಕರೆದುಕೊಂಡು ಬಂದ 1ನೇ ಆರೋಪಿ ಹಿರಿಯ ಕಾರ್ಮಿಕ ಅಧಿಕಾರಿಯಾಗಿ 4ನೇ ವೃತ್ತ ಬೆಳಗಾವಿಯಲ್ಲಿ ಕೆಲಸ ಮಾಡುತ್ತಾರೆ ಅಂತಾ ತಿಳಿಯಿತು ಎಂದರೆ ಸರಿ. ಸದರಿ ಕಾರ್ಮಿಕ ಅಧಿಕಾರಿ ಕಚೇರಿ ಉದ್ಯಮಭಾಗ ಬೆಳಗಾವಿಯಲ್ಲಿ ಇದೆ ಎಂದರೆ ಸರಿ. ಡಿ.ಸಿ. ಕಚೇರಿಯಿಂದ ಕಾರ್ಮಿಕ ಅಧಿಕಾರಿ ಕಚೇರಿ ಅಂದಾಜು 8 ಕಿ.ಮೀ ಅಂತರದಲ್ಲಿ ಇದೆ ಎಂದರೆ ಸರಿ.

4. ಆ ದಿವಸ ನಾನು 1ನೇ ಆರೋಪಿಯನ್ನು ಜಿಲ್ಲಾಧಿಕಾರಿ ಕಚೇರಿಯಿಂದ ಅವರು ಮೀಟಿಂಗನಲ್ಲಿ ಇರುವಾಗ ಕರೆದುಕೊಂಡು ಬಂದಿರುತ್ತೇನೆ. ನಾನು 1ನೇ ಆರೋಪಿಯನ್ನು ಕರೆದುಕೊಂಡು ಹೋಗಲು ಡಿ.ಸಿ. ಅವರ ಅನುಮತಿ ಪಡೆದಿಲ್ಲ, 1ನೇ ಆರೋಪಿಯನ್ನು ಹೊರಗಡೆ ಕರೆದುಕೊಂಡು ಬಂದಿರುತ್ತೇನೆ. ನಾನು 1ನೇ ಆರೋಪಿಯನ್ನು ಕರೆದುಕೊಂಡು ಬಂದು ಚಾಸಾ–18 ರವರ ಮುಂದೆ ಹಾಜರು ಮಾಡಿರುತ್ತೇನೆ, ದಸ್ತಗಿರಿ ನಿಯಮವನ್ನು ಚಾಸಾ–18 ರವರು ಪಾಲಿಸಿರುತ್ತಾರೆ, ನಾನು ಪಾಲಿಸಿರುವುದಿಲ್ಲ. ಸದರಿ ಪ್ರಕರಣದಲ್ಲಿ 1ನೇ ಆರೋಪಿ ಭಾಗಿ ಇಲ್ಲ ಅಂತಾ ಗೊತ್ತಿದ್ದರೂ ಸಹ ಕಾನೂನು ಬಾಹೀರವಾಗಿ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2ನೇ ಆರೋಪಿ ಪರ ಶ್ರೀ. ಬಿ.ಜೆ.ಜೆ ವಕೀಲರಿಂದಃ**

(2ನೇ ಆರೋಪಿತರ ಪರ ವಕೀಲರು ಪಾಟೀ ಸವಾಲು ಏನೂ ಇಲ್ಲ ಎಂದು ನುಡಿಯುತ್ತಾರೆ).

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೆ ಸರಿ ಅದೆ**

**4ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ**
**ನ್ಯಾಯಾಧೀಶರು (ಪಿಸಿಎ) ಬೆಳಗಾವಿ.**